**ದಿನಾಂಕಃ 30.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **ವಾದಿ ಪರ ಶ್ರೀ. ಎಚ್.ಎನ್.ಬಿ.ಎನ್ ವಕೀಲರಿಂದಃ**

ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದಂತೆ 1990 ರಲ್ಲಿ ವರಾಂಡ ನಿರ್ಮಿಸಿರುವ ಬಗ್ಗೆ ದಾಖಲಾತಿಗಳನ್ನು ಹಾಜರಪಡಿಸಿರುತ್ತೇನೆ. ಸದರಿ ವರಾಂಡ ನಿರ್ಮಿಸಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ವರಾಂಡದ ಮುಂಭಾಗದಲ್ಲಿ ವೆಂಕೋಬ್ ಚಿಕನ್ ಸ್ಟಾಲ್ ನಡೆಸುತ್ತಿದ್ದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದಂತೆ ಹಳೆ ವರಾಂಡವನ್ನು ಹೊಡೆದು ಹಾಕಿ ಅದರ ಜಾಗದಲ್ಲಿ ಹೊಸ ಮನೆಯನ್ನು 2013 ರಲ್ಲಿ ನಿರ್ಮಾಣ ಮಾಡಿರುತ್ತೇನೆ.

ದಾವಾ ಅನುಸೂಚಿ ಸ್ವತ್ತನ್ನು ಖರೀದಿಸಿದ ದಿನಾಂಕದಿಂದಲೂ ಪಂಚಾಯಿತಿ ದಾಖಲಾತಿಗಳು ನಮ್ಮ ಬಳಿ ಇಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಕಾಣುವ ವೆಂಕೋಬ್ ಚಿಕನ್ ಸೆಂಟರ್ ನ್ನು ಈ ದಾವೆ ಸಲ್ಲಿಸುವ ಒಂದು ವರ್ಷದ ಪೂರ್ವದಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಂಗಡಿ ಮಳಿಗೆಯನ್ನು ಮತ್ತು ಬಚ್ಚಲು ಮನೆಯನ್ನು ಯಾವುದೇ ಪರವಾನಿಗೆ ಇಲ್ಲದೆ ಒಂದು ವರ್ಷದ ಹಿಂದೆ ನಿರ್ಮಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಮಳಿಗೆಯನ್ನು ಮತ್ತು ಬಚ್ಚಲು ಮನೆಯನ್ನು ನಿರ್ಮಿಸುವ ಸಮಯದಲ್ಲಿ ವಾದಿಯವರು ಬಂದು ತಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಗ್ರಾಮದ ಮುಖಂಡರು ನನಗೆ ಅಂಗಡಿ ಮಳಿಗೆಯನ್ನು ಮತ್ತು ಬಚ್ಚಲು ಮನೆಯನ್ನು ನಿರ್ಮಿಸದಂತೆ ಸೂಚಿಸಿದ್ದರು ಎಂದರೆ ಸರಿಯಲ್ಲ. ನಂತರ ನವೆಂಬರ್ 2013 ರಲ್ಲೂ ಸಹ ನಿಪಿ-1 ರಲ್ಲಿ ತೋರಿಸಿದ ಜಿ. ಸಿ. ಇ. ಎಫ್ ಕಟ್ಟಡದ ಹಿಂಭಾಗದಲ್ಲಿ ಕಟ್ಟಡವನ್ನು ನಿರ್ಮಿಸಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 18.11.2013 ರಂದು ವಾದಿಯವರು ಬನ್ನೂರು ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸರಿ. ಅದೇ ದಿನ ವಾದಿಯವರು ಸೋಮನಾಥಪುರ ಗ್ರಾಮ ಪಂಚಾಯಿತಿಗೆ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಪೊಲೀಸರು ಸದರಿ ದೂರಿಗೆ ಸ್ವೀಕೃತಿಯನ್ನು ನೀಡಿದರೆ ಹೊರತು ನನ್ನ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿ ನಮೂದಿಸಿರುವ ಕೆಂಚೇಗೌಡರ ಮನೆ ಮತ್ತು ವಾದಿಯ ಮನೆಯ ನಡುವೆ ಸುಮಾರು 10 ರಿಂದ 12 ಅಡಿ ಜಾಗವಿರುತ್ತದೆ. ಸದರಿ ಜಾಗವು 3 ಅಡಿಯ ಗಲ್ಲಿ ಎಂದರೆ ಸರಿಯಲ್ಲ. ನಮ್ಮ ಮನೆ ಮತ್ತು ದಾವಾ ಅನುಸೂಚಿ ಸ್ವತ್ತನ್ನು ಅಳತೆ ಮಾಡಲು ಮತ್ತು ಪರೀಕ್ಷಿಸಲು ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ. ನಿಪಿ-1 ರಲ್ಲಿ ನಮೂದಿಸಿರುವ ಎ. ಬಿ. ಸಿ. ಡಿ ಜಾಗವನ್ನು ವಾದಿಯವರು ರಸ್ತೆಯಾಗಿ ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ನಿಪಿ-1 ರಲ್ಲಿ ನಮೂದಿಸಿರುವ ಎ.ಬಿ.ಸಿ.ಡಿ ಜಾಗವನ್ನು ನಾನು ಅತಿಕ್ರಮಿಸಿ ಕಟ್ಟಡವನ್ನು ನಿರ್ಮಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಟ್ಟಡವನ್ನು ನಿರ್ಮಿಸಿರುವುದರಿಂದ ವಾದಿಯವರ ಓಡಾಟಕ್ಕೆ ತುಂಬಾ ತೊಂದರೆ ಉಂಟಾಗುತ್ತಿದೆ ಎಂದರೆ ಸರಿಯಲ್ಲ.

ಲಿಂಗಮ್ಮ ರವರು ನನ್ನ ದೊಡ್ಡಮ್ಮ ಎಂದರೆ ಸರಿ. ಸದರಿ ಲಿಂಗಮ್ಮ ರವರು ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸರಿ. ಸದರಿಯವರು ರಾಜಕೀಯ ಪ್ರಭಾವದಿಂದ ದಾಖಲಾತಿಗಳನ್ನು ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಅಧಿಕಾರ ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ರಸ್ತೆಯನ್ನು ಕಬಳಿಸಬೇಕೆನ್ನುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-37 ರಲ್ಲಿ ನಮಗೆ ಅನುಕೂಲವಾಗುವಂತೆ ಕಚ್ಚಾ ನಕಾಶೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-37 ರಲ್ಲಿ ಸತ್ಯ ಸಂಗತಿಯನ್ನು ಮರೆಮಾಚಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ